ಕಾಡಾದ ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ತನ್ನ ವರದಿಯನ್ನು ಈಗ ಸಲ್ಲಿಸಿದ್ದು ಅದು ಸರ್ಕಾರದ ಪರಿಶೀಲನೆಯಲ್ಲಿದೆ. "ವೃಂದ ಮತ್ತು ನೇಮಕಾತಿ ನಿಯಮಗಳ ಮಂಜೂರಾತಿ ನೀಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

5. ಶಿವಮೊಗ್ಗ ಕ್ಷೇತ್ರದ ಮತ್ತೂರು ಗ್ರಾಮದ ಕೆರೆ ದುರಸ್ತಿಗೆ ಹಣ ಬಿಡುಗಡೆ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಕ್ಷೇತ್ರದ ಮತ್ತೂರು ಗ್ರಾಮದ ಕೆರೆ ರಿಪೇರಿ ಹಾಗೂ ಹೂಳೆತ್ತುವ ಬಗ್ಗೆ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ರೂ. 6 ಲಕ್ಷ ಮಂಜೂರು ಆಗಿದೆ. ಆ ಕೆರೆಯ ಕೆಲಸ ಸಣ್ಣ ನೀರಾವರಿ ಇಲಾಖೆಯ ಮುಖಾಂತರ ಆಗ ಬೇಕಾಗಿದೆ. ಇದುವರೆಗೂ ಕೆಲಸ ಆರಂಭ ಆಗಿಲ್ಲ. ಸಣ್ಣ ನೀರಾವರಿ ಇಲಾಖೆ ಏಕೆ ಇದುವರೆಗೆ ಕೆಲಸ ಆರಂಭ ಮಾಡಿಲ್ಲ? ಯಾವಾಗ ಆರಂಭ ಮಾಡುತ್ತೀರಿ? ಯಾವಾಗ ಕೆಲಸ ಮುಕ್ತಾಯ ಗೊಳಿಸುತ್ತೀರಿ?

ಶ್ರೀ ಓಂ ಪ್ರಕಾಶ್ ಕಣಗಲಿ (ಸಣ್ಣ ನೀರಾವರಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗ ಕ್ಷೇತ್ರದ ಮತ್ತೂರು ಗ್ರಾಮದ ಕೆರೆ ರಿಪೇರಿ ಮತ್ತು ಹೂಳೆತ್ತುವ ಬಗ್ಗೆ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಸಣ್ಣ ನೀರಾವರಿ ಇಲಾಖೆಗೆ ಯಾವ ಪ್ರಸ್ತಾವನೆಯೂ ಬಂದಿಲ್ಲ. ಆದಕಾರಣ ಸಣ್ಣ ನೀರಾವರಿ ಇಲಾಖೆಯಿಂದ ಈ ಕೆಲಸವನ್ನು ಆರಂಭಿಸಲು ಕ್ರಮ ಕೈಗೊಂಡಿಲ್ಲ. ಆದರೆ ಸದರಿ ಕೆರೆಯು ಭದ್ರಾ ಯೋಜನೆಯ ಅಚ್ಚುಕಟ್ಟು ಪ್ರದೇಶದಲ್ಲಿ ಇರುವುದರಿಂದ ಇದರ ದುರಸ್ತಿ ಮತ್ತು ಹೂಳೆತ್ತುವ ಕಾರ್ಯವನ್ನು ಭದ್ರಾ ಯೋಜನೆಯ ಅಧಿಕಾರಿಗಳೇ ಕೈಗೊಳ್ಳ ಬೇಕಾಗುತ್ತದೆ. ಈ ಬಗ್ಗೆ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಕೋರಿಕೆ ಬಂದಿದ್ದರೆ ಆದ್ಯತೆಯ ಮೇಲೆ ಕ್ರಮ ಕೈಗೊಳ್ಳಬೇಕೆಂದು ಭದ್ರ ಯೋಜನೆಯ ಇಂಜಿನಿಯರುಗಳಿಗೆ ಆದೇಶ ನೀಡಲಾಗುವುದು.

6. ತುಮಕೂರು ಜಿಲ್ಲೆಗೆ ಕುಡಿಯುವ ನೀರಿನ ಸರಬರಾಜಿಗಾಗಿ ಹಣ ಬಿಡುಗಡೆ

Sri S. Shafi Ahmed : (Tumkur) : Sir, Due to the shortfall of rainfall in Tumkur district, there is an acute shortage of drinking water. No funds have been released under the Scarcity Relief fund to Tumkur district.

Immediately, Rs. 1.50 Crores to Tumkur District and Rs. 25 lakhs exclusively to C.M.C. Tumkur may be released for the salvation of drinking water problem by drilling the Borewells and also to deepen the existing borewells.

ಶ್ರೀ ಧರ್ಮಸಿಂಗ್ : (ಕಂದಾಯ ಹಾಗೂ ಸಮಾಜಕಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೆ ರಾಜ್ಯದಲ್ಲಿ 1993ನೇ ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಮುಂಗಾರು ಮಳೆಯ ಕೊರತೆಯಿಂದಾಗಿ 16 ಜಿಲ್ಲೆಗಳ 50 ತಾಲ್ಲೂಕುಗಳು ಅಭಾವಕ್ಕೆ ತುತ್ತಾಗಿದ್ದುವು. ಈ ಪೈಕಿ ತುಮಕೂರು ಜಿಲ್ಲೆಯ 8 ತಾಲ್ಲೂಕುಗಳೂ ತೀವ್ರ ಅಭಾವಕ್ಕೊಳಗಾಗಿದ್ದವು. ತುಮಕೂರು ಜಿಲ್ಲೆಯ ಈ ಅಭಾವ ಪೀಡಿತ ಪ್ರದೇಶಗಳಲ್ಲಿ ಬರ ಪರಿಹಾರ ಕಾರ್ಯಗಳಿಗಾಗಿ ದಿನಾಂಕ 1.4.1993 ರಿಂದ 7.2.1994ರವರೆಗೆ ಈ ಕೆಳಕಂಡಂತೆ ಅನುದಾನವನ್ನು ಒದಗಿಸಲಾಗಿದೆ.

ಅ)	ಕುಡಿಯುವ ನೀರಿನ ಪೂರೈಕೆಗಾಗಿ	-	ರೂ. 120.00 ಲಕ್ಷ
ಆ)	ಉದ್ಯೋಗ ಸೃಜನೆಗಾಗಿ	-	ರೂ. 65.00 ಲಕ್ಷ
	ಒಟ್ಟು :		ರೂ. 185.00 ಲಕ್ಷಗಳು

ಈ ಮೇಲ್ಕಂಡ ಹಣದಲ್ಲಿ ತುಮಕೂರು ಜಿಲ್ಲೆಯಲ್ಲಿ ಕುಡಿಯುವ ನೀರಿನ ಪೂರೈಕೆ ಸಲುವಾಗಿ ಕೊರೆದ ಕೊಳವೆ ಭಾವಿಗಳ ಪ್ರಗತಿಯ ಸ್ಥೂಲ ಚಿತ್ರಣ ಕೆಳಕಂಡಂತಿದೆ

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಬಾಧಿತ ನಗರಸಭೆ : ಪುರಸಭೆ ತಾಲ್ಲೂಕಿನ ಹೆಸರು	ಕೊರೆದ ಕೊಳವೆ ಭಾವಿಗಳ ಸಂಖ್ಯೆ	ಮಾಡಲಾದ ವೆಚ್ಚ	
1.	ನಗರಸಭೆ, ತುಮಕೂರು	28	12.00	ಮೋಟರ್ ಮತ್ತು ಪಂಪ್
2.	ಪುರಸಭೆ, ಸಿರಾ	13	2.50	ಖರೀದಿಗೆ
3.	ಪುರಸಭೆ, ತಿಪಟೂರು	12	3.00	ರೂ. 4.40ಲಕ್ಷಗಳೂ ಸೇರಿವೆ.
4.	ಪುರಸಭೆ ಕುಣಿಗಲ್ (ಮೋಟರ್ ಖರೀದಿಯ ವೆಚ್ಚ ರೂ. 0.93 ಲಕ್ಷ ಸೇರಿ)	4	2.00	
5.	ಪುರಸಭೆ, ಮಧುಗಿರಿ ನೀರು ಸರಬರಾಜು ಕಾಮಗಾರಿ		5.00	
6.	ತುಮಕೂರು ಗ್ರಾಮಾಂತರ	45	14.56	
7.	ಗುಬ್ಬಿ	34	11.00	
8.	ಕುಣಿಗಲ್	32	10.36	
9.	ತಿಪಟೂರು	28	9.07	
10.	ತುರುವೇಕೆರೆ	22	7.12	
11.	ಚಿಕ್ಕನಾಯಕನಹಳ್ಳಿ	23	7.44	
12.	ಮಧುಗಿರಿ	31	10.03	
13.	ಸಿರಾ	21	6.80	
14.	ಕೊರಟಗೆರೆ	28	9.60	
15.	ಪಾವಗಡ	20	6.47	
	ಒಟ್ಟು :	341	116.95	

ತುಮಕೂರು ಜಿಲ್ಲಾಧಿಕಾರಿಗಳು, ಈಗಾಗಲೇ ತುಮಕೂರು ನಗರಸಭೆ ವ್ಯಾಪ್ತಿಯ ಕೆಲವು ಬಡಾವಣೆಗಳಲ್ಲಿ, ಕೆಲವು ಪುರಸಭೆಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗಿರುವುದಾಗಿ ಮತ್ತು ಕೆಲವು ಗ್ರಾಮಗಳಲ್ಲಿ ಕೆರೆ-ಕಟ್ಟೆಗಳಲ್ಲಿ ಭಾವಿಗಳಲ್ಲಿ ಸಾಕಷ್ಟು ನೀರಿದ್ದರೂ ಸಹ, ಆ ನೀರು ಕುಡಿಯಲು ಯೋಗ್ಯವಾಗಿಲ್ಲದ ಪ್ರಯುಕ್ತ ಕೊಳವೆ ಭಾವಿಗಳನ್ನು ಕೊರೆಯುವ ಅವಶ್ಯಕತೆ ಇರುವುದಾಗಿ ವರದಿ ಮಾಡಿರುತ್ತಾರೆ. ಆದ್ದರಿಂದ, ಅಭಾವ ಪೀಡಿತ ಪ್ರದೇಶಗಳಲ್ಲಿ ಕೊಳವೆ ಭಾವಿಗಳನ್ನು ಕೊರೆಯಲು ಈ ಕೆಳಕಂಡ ಕ್ರಮಗಳನ್ನು ಹಾಕಿಕೊಂಡಿದ್ದಾರೆ.

ಕ್ರ. ಸಂ.	ಬಾಧಿತ ನಗರಸಭೆ ಪುರಸಭೆ : ತಾಲ್ಲೂಕಿನ ಹೆಸರು	ಕೊಳವೆ ಭಾವಿಗಳು	ಅಂದಾಜು ವೆಚ್ಚ
1.	ತುಮಕೂರು ನಗರಸಭೆ	70	
2.	ಪುರಸಭೆ, ಸಿರಾ	10	
3.	ಪುರಸಭೆ, ಚಿಕ್ಕನಾಯ್ಕನಹಳ್ಳಿ	10	
4.	ಪುರಸಭೆ, ಮಧುಗಿರಿ	10	150.00 ಲಕ್ಷಗಳು
5.	ಪುರಸಭೆ, ಕುಣಿಗಲ್	10	

6.	ಪುರಸಭೆ, ತಿಪಟೂರು	10
7.	ಜಿಲ್ಲೆಯ 10 ತಾಲ್ಲೂಕುಗಳ ಗ್ರಾಮಾಂತರ ಪ್ರದೇಶಗಳಲ್ಲಿ	300
	ಒಟ್ಟು :	420

ಈ ಮೇಲೆ ಹಮ್ಮಿಕೊಂಡ ಕಾರ್ಯಕ್ರಮಗಳನ್ನು ಆಯಾ ಇಲಾಖೆಯಡಿಯಲ್ಲಿ, ಅಂದರೆ - ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಾಮಾನ್ಯ ಯೋಜನೆಯಡಿಯಲ್ಲಿ ಲಭ್ಯವಿರುವ ಹಣವನ್ನು ನಿರ್ಧರಿಸಿ, ಅಗತ್ಯವಿರುವ ಕಡೆ 'ಪ್ರಕೃತಿ ವಿಕೋಪ ಪರಿಹಾರ ನಿಧಿ' ಯಿಂದ ಹಣವನ್ನು ಒದಗಿಸಿ, ಕಾರ್ಯಗತ ಗೊಳಿಸಲು ಯತ್ನಿಸಲಾಗುವುದು.

7. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆರಹಾವಳಿಯಿಂದ ಹಾನಿಗೀಡಾಗಿರುವ ರೈತರಿಗೆ ಪರಿಹಾರ.

ಶ್ರೀ ವಿಜಯಕುಮಾರ್ ಶೆಟ್ಟಿ : (ಸೂರತ್ಕಲ್) ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನವೆಂಬರ್ 8 ರಂದು (1993) ಬಂದ ಭೀಕರ ನೆರೆಯಿಂದಾಗಿ ಹಲವಾರು ಮನೆಗಳು ಬಿದ್ದು ಹೋಗಿವೆ, ಬೆಳೆಗಳು ಹಾಳಾಗಿವೆ ಮತ್ತು ನೀರಾವರಿಗೆ ಬೇಕಾದ ದಂಡೆ, ನಾಲೆಗಳು ಒಡೆದು ಹೋಗಿ ತುಂಬ ನಷ್ಟವಾಗಿದೆ. ಒಟ್ಟು ಅಂದಾಜು ನಷ್ಟ ಸುಮಾರು 8 ಕೋಟಿ ಎಂದು ಜಿಲ್ಲಾಧಿಕಾರಿಯವರ ಮುಖಾಂತರ ತಿಳಿಸಿದೆ ಯಾದರೂ ಈ ತನಕ ಬಿಡುಗಡೆಯಾದ ಹಣ ಮಾತ್ರ ಕೇವಲ 10 ಲಕ್ಷ ರೂಪಾಯಿಗಳು. ಅನಾವೃಷ್ಟಿಯಿಂದ ತೊಂದರೆಗೊಳಗಾದ ಎಲ್ಲಾ ಕಾಮಗಾರಿಗಳನ್ನು ಮತ್ತು ರೈತರ ಬೆಳೆ ಪರಿಹಾರವನ್ನು ಕೂಡಲೇ ಕೊಡುವ ವ್ಯವಸ್ಥೆ ಆಗ ಬೇಕೆಂದು ವಿನಂತಿಸುತ್ತೇನೆ.

ಶ್ರೀ ಧರ್ಮಸಿಂಗ್ (ಕಂದಾಯ ಹಾಗೂ ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಆಕ್ಟೋಬರ್, 1993ರಲ್ಲಿ ಉಂಟಾದ ಅತೀವೃಷ್ಟಿ ನೆರೆ ಹಾವಳಿಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ 8ತಾಲ್ಲೂಕುಗಳ 116ಗ್ರಾಮಗಳು ತೊಂದರೆಗೊಳಗಾಗಿದ್ದವು. ಈ ನೆರೆ ಹಾವಳಿಯಿಂದಾಗಿ ಜಿಲ್ಲೆಯಲ್ಲಿನ ಖಾಸಗಿ ಮತ್ತು ಸಾರ್ವಜನಿಕ ಆಸ್ತಿಗಳಿಗೆ ಉಂಟಾದ ನಷ್ಟದ ವಿವರಗಳು ಈ ಕೆಳಕಂಡಂತಿವೆ.

		ಅಂದಾಜು ಹಾನಿ ಲಕ್ಷ ರೂ.ಗಳಲ್ಲಿ	
ಖಾಸಗಿ ಆಸ್ತಿ			
1.	ಮೃತಪಟ್ಟವರು	9	
2.	ಗಾಯಗೊಂಡವರು	10	
3.	ಜಾನುವಾರು ಹಾನಿ	-1	0.05
4.	ಕೃಷಿ ಬೆಳೆಹಾನಿ	456.72ಎಕರೆಗಳು	-
5.	ಪೂರ್ಣ ಹಾನಿಗೊಂಡ ಮನೆಗಳು	15	2.50
6.	ಭಾಗಶಃ ಹಾನಿಗೊಂಡ ಮನೆಗಳು	194	6.78
7.	ನೀರಾವರಿ ಪಂಪ್ ಸೆಟ್ಸ್	-2	0.12
	ಒಟ್ಟು		9.45
ಸಾರ್ವಜನಿಕ ಆಸ್ತಿ			
1.	ಕಟ್ಟಡಗಳು	-74	16.89